


# ಗುರುದೇವ


ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಶೋಭಕೃತು ನಾಮ ಸಂವತ್ಸರ
ಪುಟ : ೪ ಸಂಪುಟ : ೭೦ ಸಂಚಿಕೆ : ೦೪

15-03-2024 ಫಾಲ್ಗುಣ ಮಾಸ : ಶುಕ್ಲ ಪಕ್ಷ ಶುಕ್ರವಾರ
RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

### "ಫಲಿತಾಂಶ"

ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸಾಧನೆ ಮಾಡಿ ಸಫಲತೆಯನ್ನು ಹೊಂದಬೇಕು ಎಂದು ಬಯಸುತ್ತಾನೆ. ಸಫಲತೆಯು ಕೇವಲ ಏಕಾಂತದಲ್ಲಿರುವುದರಿಂದ ಅಥವಾ ಬಹಳಷ್ಟು ಜ್ಞಾನಾಭ್ಯಾಸವನ್ನು ಮಾಡುವುದರಿಂದ ಸಿಗುವುದಿಲ್ಲ. ಪ್ರಯತ್ನಪೂರ್ವಕವಾಗಿ ತನ್ನ ಗುರಿಯತ್ತ ನಡೆದಲ್ಲಿ ವ್ಯಕ್ತಿಗೆ ಯಶಸ್ಸು ಪ್ರಾಪ್ತವಾಗುತ್ತದೆ.

**ದೀರ್ಘಾಜಾಗ್ರತೋ ರಾತ್ರಿಃ ದೀರ್ಘಂ ಶ್ರಾತಸ್ಯ ಯೋಜನಮ್ ।**
**ದೀರ್ಘೋ ಬಾಲಾನಾಂ ಸಂಸಾರಃ ಸದ್ಧರ್ಮಮ್ ಅವಿಜಾನತಾಮ್ ॥**

ರಾತ್ರಿಯಿಡಿ ಎಚ್ಚರವಿದ್ದವಗೆ ರಾತ್ರಿಯು ದೊಡ್ಡದೆನಿಸುತ್ತದೆ. ಯಾರು ನಡೆದು ಸಾಗುತ್ತಿರುವನೋ ಅವನಿಗೆ ಒಂದಡಿಯು ದೂರವೆನಿಸುತ್ತದೆ. ಹಾಗೆಯೇ ಸದ್ಧರ್ಮದ ಜ್ಞಾನವಿಲ್ಲದವನಿಗೆ ಜೀವನವು ದೊಡ್ಡದೆನಿಸುತ್ತದೆ.

WWW.HOMBUJAPADMAVATI.ORG

ಅಂದರೆ ಮನುಷ್ಯ ತನ್ನ ಸಾಧನೆಯ ಗುರಿ ನಿಶ್ಚಿತ ಮಾಡಿಕೊಂಡು ಒಂದೊಂದು ಹೆಜ್ಜೆ ಸರಿಯಾಗಿ ಹಾಕುತ್ತಾ ಸಾಗಿದಾಗಲೇ ಸಫಲತೆ ಸಿಗುವುದು.

ಒಂದೂರಲ್ಲಿ ಒಬ್ಬ ವ್ಯಕ್ತಿ ತುಂಬಾ ನಿರಾಶನಾಗಿ ಬದುಕುತ್ತಿದ್ದ. ಬಹಳ ದುಃಖಿಯಾಗಿದ್ದ. ತಾನು ಏನು ಕೆಲಸ ಮಾಡಿದರು ಸಫಲತೆ, ಯಶಸ್ಸು ಸಿಗುತ್ತಿಲ್ಲವೆಂದು ದುಃಖಿಸುತ್ತಿದ್ದ. ಆತ ಒಂದು ದಿನ ಸಂತರ ಬಳಿ ಹೊದನು. ಅವರ ಬಳಿ ಎಲ್ಲಾ ದುಃಖವನ್ನು ಹೇಳಿಕೊಂಡನು. ಸಾಧುಗಳು ಆತನ ವಿಷಯವನ್ನು ಸಮಾಧಾನದಿಂದ ಕೇಳಿಸಿಕೊಂಡರು.

ಆತನಿಗೆ ಸಾಂತ್ವಾನ ಹೇಳುತ್ತಾ ಒಂದು ಕಥೆಯನ್ನು ಹೇಳುವೆನು. ಅದರಿಂದ ನಿನಗೆ ಒಂದು ಸಮಾಧಾನ ಮತ್ತು ಉಪಾಯ ಸಿಗಬಹುದೆಂದು ಕಥೆಯನ್ನು ಹೇಳುತ್ತಾರೆ.

ಒಬ್ಬ ರೈತನು ತನ್ನ ಹೊಲದಲ್ಲಿ ಬಹಳಷ್ಟು ಸಮಯ ಪರಿಶ್ರಮ ಪಟ್ಟು ಕೆಲಸ ಮಾಡಿದರೂ ಯಾವುದೇ ರೀತಿಯ ಫಸಲು ಆತನಿಗೆ ದಕ್ಕುತ್ತಿರಲಿಲ್ಲ. ಒಮ್ಮೆ ಆತನಿಗೆ ಅನುಭವಿಯೊಬ್ಬರು ಮಾರ್ಗದರ್ಶನ ಮಾಡುತ್ತಾ, "ನಾನು ನಿನ್ನ ಹೊಲದಲ್ಲಿ ಒಂದೊಂದೇ ಬೀಜವನ್ನು ಒಂದೊಂದು ದಿನ ಹಾಕುತ್ತಾ ಅದಕ್ಕೆ ನೀರುಣಿಸುವಂತೆ" ಹೇಳಿದರು.

ಅದರಂತೆ ರೈತನು ಹೊಲದಲ್ಲಿ ಒಂದು ದಿನ ಒಂದು ಬೀಜವನ್ನು ನೆಡುತ್ತಾ ಅದಕ್ಕೆ ನೀರು ಕೊಡುತ್ತಾ ಇದ್ದನು. ಹೀಗೆ ನೋಡ ನೋಡುತ್ತಲೇ ದಿನವು ಒಂದೊಂದು ಬೀಜವು ಮೊಳಕೆಯೊಡೆದು ಗಿಡವಾಗಿ, ಫಲ ಬರುವಂತೆ ಬೆಳೆದವು. ಉತ್ತಮವಾದ ಫಸಲನ್ನು ಕಂಡು ರೈತ ಸಂತೋಷವಾಗಿ ಜೀವನ ನಡೆಸಲು ಆರಂಭಿಸಿದನು ಎಂದು ಸಂತರ ಹೇಳುತ್ತಾರೆ.

ಈ ಕಥೆಯನ್ನು ಕೇಳಿದ ವ್ಯಕ್ತಿಗೆ ತನ್ನ ತಪ್ಪಿನ ಅರಿವಾಗಿ ಸಫಲತೆ ಅಥವಾ ಯಶಸ್ಸು ಜೀವನದಲ್ಲಿ ಒಮ್ಮೆಯು ಬರುವುದಿಲ್ಲ. ನಿರಂತರ ಪ್ರಯತ್ನಕ್ಕೆ ಸಿಗುವುದು ನಿಜವಾದ ಶ್ರೇಷ್ಠವಾದ ಫಲ ಎಂದು ಪ್ರಯತ್ನ ಶೀಲನಾದ. ಮುಂದೊಂದು ದಿನ ಉತ್ತಮ ಜೀವನವನ್ನು ಹೊಂದಿದನು.

ಕಥೆಯ ಸಾರಾಂಶವಿಷ್ಟೇ ಮನುಷ್ಯನಿಗೆ ಯಶಸ್ಸು ಪುರುಷಾರ್ಥದಿಂದ ಸಿಗುವಂತಹದ್ದು. ಸದ್ಯ ಎಲ್ಲೆಡೆ ಮಕ್ಕಳಿಗೆ ಶಾಲಾ ಪರೀಕ್ಷೆಗಳು ನಡೆಯುತ್ತಿವೆ. ವರ್ಷವಿಡೀಯ ಪ್ರಯತ್ನದ ಫಲಿತಾಂಶದ ಸಮಯ. ಒಂದು ಪರೀಕ್ಷೆಗೆ ಹಲವು ದಿನಗಳ ಪ್ರಯತ್ನ ಏಕಾಗ್ರತೆಯ ಫಲ ಈಗ ಸಿಗುವಂತಹದ್ದು. ಎಲ್ಲಾ ವಿದ್ಯಾರ್ಥಿಗಳು ಉತ್ತಮವಾದ ಭವಿಷ್ಯಕ್ಕೆ ಚೆನ್ನಾಗಿ ಧೈರ್ಯವಾಗಿ ಪರೀಕ್ಷೆ ಬರೆದು ಉತ್ತೀರ್ಣರಾಗಿರಿ.

ಶುಭವಾಗಲಿ.

ವಿನಯಾಂಜಲಿ ಕಾರ್ಯಕ್ರಮ

## ಸಮ್ಯಕ್ತ್ವ ಪ್ರಾಪ್ತಿ ಮಾಡಿಕೊಂಡ ರಾಷ್ಟಸಂತ ಪ್ರಾತಃಸ್ಮರಣೀಯ ವಿದ್ಯಾಸಾಗರ ಮುನಿಶ್ರೀಯವರು

-ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಹೊಂಬುಜ :** ರಾಷ್ಟ್ರಸಂತ ಆಚಾರ್ಯ ಶ್ರೀ 108 ವಿದ್ಯಾಸಾಗರ ಮುನಿಶ್ರೀಯವರು 77ನೇ ವಯಸ್ಸಿನಲ್ಲಿ ಸಲ್ಲೇಖನ ವ್ರತದ ಬಳಿಕ ಸಮಾಧಿ ಮರಣ ಹೊಂದಿದರು. ಅವರ ಅಗಲಿಕೆಯು ಜೈನಧರ್ಮೀಯರಿಗಲ್ಲದೇ, ಇಡೀ ದೇಶದ ಎಲ್ಲಾ ಧರ್ಮದವರಿಗೆ ದುಃಖವನ್ನುಂಟು ಮಾಡಿದೆ ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಫೆ. 19ರ ಸೋಮವಾರದಂದು ಶ್ರೀಕ್ಷೇತ್ರದಲ್ಲಿ ನಡೆದ ವಿನಯಾಂಜಲಿ ಸಭೆಯಲ್ಲಿ ತಿಳಿಸಿದರು.

2ನೇ ಪುಟಕ್ಕೆ

ನೂತನ ಸಮುದಾಯ ಭವನಕ್ಕೆ ಭೂಮಿ ಪೂಜೆ

## "ಸಮುದಾಯ ಭವನದಿಂದ ಸರ್ವರಿಗೂ ಸಮರ್ಪಕ ಸೇವೆ"

-ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾದ ಸಮುದಾಯ ಭವನದ ನೂತನ ಕಟ್ಟಡ ನಿರ್ಮಾಣಕ್ಕೆ ಫೆ. 22, 2024ನೇ ಶುಭದಿನ ಗುರುವಾರದಂದು ಭೂಮಿ ಪೂಜೆ ನೆರವೇರಿಸಲಾಯಿತು.

2ನೇ ಪುಟಕ್ಕೆ

'ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ' ಇಂಡಿ, ವಿಜಯಪುರ ಇವರಿಗೆ

## "ಸಿದ್ಧಾಂತ ಕೀರ್ತಿ" ಪ್ರಶಸ್ತಿ



ಹೊಂಬುಜ : ಶ್ರೀ ಜೈನ ಮಠದ ವತಿಯಿಂದ ನೀಡುವ 2024ನೇ ಸಾಲಿನ ಸಿದ್ಧಾಂತಕೀರ್ತಿ ಪ್ರಶಸ್ತಿಯನ್ನು ಜೈನ ಆಗಮ ಗ್ರಂಥಗಳ ಅನುವಾದಕರು, ಸಂಶೋಧಕರು, ಸಂಪಾದಕರು, ರಾಷ್ಟ್ರಪ್ರಶಸ್ತಿ ವಿಭೂಷಿತ ನಿವೃತ್ತ ಶಿಕ್ಷಕರಾದ ಬ್ರ॥ ಶ್ರೀ ರತನಚಂದ ನೇಮಿನಾಥ ಕೋಟಿ ಇವರಿಗೆ ನೀಡಲಾಗುವುದೆಂದು ಪರಮಪೂಜ್ಯ ಶ್ರೀಗಳು ಘೋಷಿಸಿರುತ್ತಾರೆ. ಈ ಪ್ರಶಸ್ತಿಯನ್ನು ವಾರ್ಷಿಕ ಮಹಾರಥಯಾತ್ರಾ ಮಹೋತ್ಸವದ ಮುನ್ನಾ ದಿನವಾದ 31-03-2024ರ ಭಾನುವಾರ ನಡೆಯುವ ಧಾರ್ಮಿಕ ಸಭೆಯಲ್ಲಿ ನೀಡಲಾಗುವುದು. ಇಂಡಿಯಲ್ಲಿ ಜನಿಸಿದ ಇವರು ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಇಂಡಿಯಲ್ಲೇ ಮುಗಿಸಿದರು. ತಂದೆಯವರ

2ನೇ ಪುಟಕ್ಕೆ

1ನೇ ಪುಟದಿಂದ

## ವಿನಯಾಂಜಲಿ ಕಾರ್ಯಕ್ರಮ

ಕರ್ನಾಟಕದಲ್ಲಿ ಜನಿಸಿದ ಆಚಾರ್ಯ ಶ್ರೀಗಳು ಉತ್ತರ ಭಾರತದ ನೂರಾರು ಜಿನಾಲಯಗಳ ಪಂಚಕಲ್ಯಾಣ ನೆರವೇರಿಸಿದ್ದನ್ನು ನೆನಪಿಸಿದರು.

ವಿದ್ಯಾಸಾಗರ ಮುನಿಶ್ರೀಯವರು **"ಪ್ರಾಕೃತ, ಸಂಸ್ಕೃತ, ಹಿಂದಿ, ಮರಾಠಿ, ಕನ್ನಡ, ಇಂಗ್ಲೀಷ್ ಮುಂತಾದ ಹತ್ತಕ್ಕೂ ಹೆಚ್ಚು ಭಾಷಾ ಪಾಂಡಿತ್ಯವನ್ನು ಹೊಂದಿದ್ದರು. 100ಕ್ಕೂ ಹೆಚ್ಚು ಜೈನ ಧರ್ಮ ತತ್ವ ಸಂಸ್ಕಾರ, ಸಂಸ್ಕೃತಿಗಳ ಕೃತಿ ರಚಿಸಿದ್ದಾರೆ. ಶಿಷ್ಯರಿಗೆ ದೀಕ್ಷಾ ಗುರುಗಳಾಗಿ ಉನ್ನತ ಆದರ್ಶ ತೋರಿದ್ದಾರೆ. ಸತತ 60 ವರ್ಷಗಳ ಕಾಲ ಉತ್ತರ ಭಾರತದಲ್ಲಿ ಪ್ರಭಾವೀ ಪ್ರವಚನದ ಮೂಲಕ ಸಮಾಜದ ಸಾಮರಸ್ಯ, ಸಹಬಾಳ್ವೆಗೆ ಪ್ರೇರಣೆ ನೀಡಿದ್ದರು. ಅವರು ಸಮ್ಯಕ್ತ್ವ ಪ್ರಾಪ್ತಿ ಮಾಡಿಕೊಂಡ ಶ್ರೇಷ್ಠ ಮುನಿಶ್ರೀಗಳಾಗಿದ್ದರು ಮತ್ತು ಪ್ರಾತಃ ಸ್ಮರಣೀಯರಾಗಿ ದೇಹತ್ಯಾಗವಾದರೂ ನಾವೆಲ್ಲರೂ ಅವರ ಸನ್ಮಾರ್ಗ ಪಥದಲ್ಲಿ ಸಾಗೋಣ"** ಎಂದು ಹೊಂಬುಜ ಶ್ರೀಗಳು ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪ್ರಾರ್ಥಿಸಿ ವಿನಯಾಂಜಲಿ ಸಮರ್ಪಿಸಿದರು. ಶ್ರಾವಕ-ಶ್ರಾವಿಕೆಯರು ಪುಷ್ಪಗಳನ್ನಿರಿಸಿ ಗೌರವ ಸಲ್ಲಿಸಿದರು.

## ನೂತನ ಸಮುದಾಯ ಭವನಕ್ಕೆ ಭೂಮಿ ಪೂಜೆ

1ನೇ ಪುಟದಿಂದ

ನೂತನ ಸಮುದಾಯ ಭವನ ನಿರ್ಮಾಣಕ್ಕೆ ಪೂಜ್ಯ ಮಹಾಸ್ವಾಮೀಜಿಗಳವರು 09-30ರ ಶುಭ ಮುಹೂರ್ತದಲ್ಲಿ ಭೂಮಿಪೂಜೆ ನೆರವೇರಿಸಿ ಭಕ್ತರ ಹಾಗೂ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ನಿರ್ಮಾಣಗೊಳ್ಳಲಿರುವ ಸಮುದಾಯ ಭವನ ಬಹುಪಯೋಗಿ ಸಮುದಾಯ ಭವನ ಸರ್ವರಿಗೂ ಸರ್ವಪರ್ಕ ಸೇವೆ ದೊರೆಯಲಿದೆ. ಬಹುಪಯೋಗಿ ಸಮುದಾಯ ಭವನವು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಅಭಿವೃದ್ಧಿ ಯೋಜನೆಯಲ್ಲಿ ಉತ್ತಮ ಸೌಲಭ್ಯ ಒದಗಿಸಲಿದೆ. ಈ ಸುಸಜ್ಜಿತ ಸಮುದಾಯ ಭವನವು ಜನಕಲ್ಯಾಣ ಕಾರ್ಯಗಳಿಗೆ ಬೇಗ ಲಭ್ಯವಾಗಲಿ ಎಂದು ಅಶೀರ್ವದಿಸಿದರು.

ಪುರೋಹಿತ ವರ್ಗದವರು ಪೂಜಾ ಕಾರ್ಯಗಳನ್ನು ನಡೆಸಿದರು. ಹೊಂಬುಜ ಜೈನ ಮಠದ ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಕಾಶ ನೇ. ಮಗದುಮ್ಮ, ಆಡಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ್, ಜಿ. ಮಂಜಪ್ಪ, ಡಾ॥ ಜೀವಂಧರ್ ಜೈನ್, ರತ್ನಕುಮಾರ್, ದೇವೇಂದ್ರ, ಕರ್ನಾಟಕ ರಾಜ್ಯ ಹ್ಯಾಬಿಟೆಟ್ ಕೇಂದ್ರದ ಎಂಜಿನಿಯರ್‌ಗಳು, ಶ್ರೀ ಕ್ಷೇತ್ರದ ಶ್ರಾವಕರು, ಭಕ್ತರು ಮುಂತಾದವರು ಆಗಮಿಸಿದ್ದರು.

1ನೇ ಪುಟದಿಂದ

## "ಸಿದ್ಧಾಂತ ಕೀರ್ತಿ" ಪ್ರಶಸ್ತಿ

ಇಚ್ಛೆಯಂತೆ ಟಿ.ಸಿ.ಎಚ್. ತರಬೇತಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಜೀವನ ಆರಂಭಿಸಿದರು. ತಮ್ಮ 45ನೇ ವಯಸ್ಸಿನಲ್ಲಿ ಜೈನಾಲಜಿ ವಿಷಯದಲ್ಲಿ ಎಂ.ಎ. ಪದವಿ ಪಡೆದರು. ಶಿಕ್ಷಕರಾಗಿ ಸೇವೆಯಲ್ಲಿ ಇದ್ದಾಗಲೂ ಸಹ ಧರ್ಮ, ಧ್ಯಾನ ಹಾಗೂ ಶಾಸ್ತ್ರಗಳನ್ನು ಬರೆಯುವ ಜೊತೆಗೆ ಧರ್ಮದ ಪ್ರಚಾರ ಮಾಡುತ್ತಿದ್ದರು. ಸರಕಾರಿ ಸೇವೆಯಲ್ಲಿಯೂ ಶ್ರೇಷ್ಠ ಶಿಕ್ಷಕರೆಂದು ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುವರು. ಸೇವೆಯಿಂದ ನಿವೃತ್ತರಾದ ಬಳಿಕವೂ ನಿರಂತರ ತಮ್ಮನ್ನು ಸಂಪೂರ್ಣ ಧರ್ಮ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

WWW.HOMBUJAPADMAVATI.ORG

ಜೈನ ಆಗಮ ಅಭ್ಯಾಸಿಗಳಾಗಿರುವ ಇವರು ಧವಲಾ, ಜಯಧವಲ ಹಾಗೂ ಮಹಾಧವಲ ಸಂಪುಟಗಳ ಅನುವಾದ ಮಾಡಿರುತ್ತಾರೆ. ಇದಲ್ಲದೇ ನಂದಗೋಕುಲ, ಪುಣ್ಯಭೂಮಿ ಭಾರತ, ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರರು, ಭಕ್ತಾಮರಸ್ತೋತ್ರ ಧ್ಯಾನಸೂತ್ರಗಳು, ಧ್ಯಾನವೇ ಧರ್ಮ, ತತ್ವಾರ್ಥಸೂತ್ರ ದೀಪಿಕೆ, ಭಗವಾನ ಪಾರ್ಶ್ವನಾಥ ತೀರ್ಥಂಕರರು, ಹೀಗೆ ಹಲವಾರು ಗ್ರಂಥಗಳನ್ನು ಅನುವಾದ ಮಾಡಿ ಸಂಗ್ರಹಿಸಿ ಹಾಗೂ ಸ್ವತಂತ್ರವಾಗಿ ರಚಿಸಿ ಸಂಪಾದಿಸಿದ್ದಾರೆ. ಜೈನ ಶ್ರಾವಕ ಸಂಸ್ಕಾರ ಸಿಂಧು ಇವರ ಬೃಹತ್ ಕೃತಿಯಾಗಿದೆ.

ಇವರ ಈ ಎಲ್ಲಾ ನಿಸ್ವಾರ್ಥ ಸೇವೆ, ಧಾರ್ಮಿಕ ಕಾಳಜಿ, ಸಾಮಾಜಿಕ ಸ್ಪಂದನೆ, ಜಿನವಾಣಿ ಸೇವೆಗಳನ್ನು ಗುರುತಿಸಿದ ಮಠ ಮಾನ್ಯಗಳು, ಜೈನ ಸಮಾಜಗಳು ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ದಕ್ಷಿಣ ಭಾರತ ಜೈನ ಸಭಾದಿಂದ ಆಚಾರ್ಯ ಬಾಹುಬಲಿ ಕನ್ನಡ ಸಾಹಿತ್ಯ ಪುರಸ್ಕಾರ, ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿದ್ಯಾಪೀಠ ಪುರಸ್ಕಾರ, ಧರ್ಮಭೂಷಣ ಪ್ರಶಸ್ತಿ, ಮೂಡಬಿದಿರೆ ಮಠದಿಂದ ಜಿನವಾಣಿ ಪುರಸ್ಕಾರ ಹಾಗೂ ಭಾರತೀಯ ಜೈನ ಮಿಲನ್, ವಲಯ-8 ಇವರಿಂದ ಮಿಲನಶ್ರೀ ಹೀಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಅನೇಕ ಸಂಘ-ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ.

*Statement about ownership and other particulars about News Paper*

**"GURUDEVA"**

Form - 14 (See Rule - 8)

1. Place of Publication : Gurudeva Karyalaya. Sri HOMBUJA, Jain Math P.O. HUMCHA 577 436, Shimoga Dist. Karnataka - St.
2. Periodical of its Publication : Kannada, Monthly
3. Printer's Name Nationality and Address : C.D.Ashok Kumar, Indian, Sri Mahaveera Printing Press. : J.P.N. Road, Durgigudi, Shimoga, Karnataka -St.
4. Publisher's Name, Nationality and Address C.D.Ashok Kumar, Administrator on behalf Hombuja Jain Math, Gurudeva Karyalaya. Sri HOMBUJA, Jain Math, P.O. HUMCHA - 577436, Shimoga Dist. Karnataka - St.
5. Editors Name, Nationality and Address C.D.Ashok Kumar, Indian, Gurudeva Karyalaya. Sri : HOMBUJA Jain Math P.O.. HUMCHA - 577436, Shimoga Dist. Karnataka - St.
6. Name and Address of the Individual who own the News Paper. : Jagadguru Swasthi Sri Devendra Keerthi Bhattaraka Maha Swamiji, Hombuja Jain Math, Gurudeva Karyalaya. Sri HOMBUJA, Jain Math, P.O. HUMCHA - 577436, Shimoga Dist.Karnataka- St.

I, C.D. Ashok Kumar, hereby declare that the particulars given above are true to the best of my knowledge and belief.

Place : HUMCHA
Date : 15-3-2024

Sd/-
C.D. Ashok Kumar

**ಜಿನ-ದನಿ**

**ಸಮಾಜೋ ತಂ ವಿಆಣೇಜ್ಜಾ, ಣಿವಹೋ ಸಜ್ಜಣಾಣ ಹು ।**
**ಜತ್ಥ ವಿ ಮಿಲಿಊಣಂ ಚ, ವಸದಿ ಪೇಮ್ಮ-ಪುವ್ವಗಂ ॥ 35 ॥**

**ಅರ್ಥ : ಎಲ್ಲಿ ಒಗ್ಗಟ್ಟಿನಿಂದ ಉತ್ತಮ ಪುರುಷರ ಸಮೂಹವು ಪ್ರೇಮಭಾವದಿಂದ ವಾಸಮಾಡುತ್ತದೆಯೋ, ಅದನ್ನೇ ನಿಶ್ಚಯದಿಂದ ಸಮಾಜವೆಂದು ಕರೆಯುತ್ತಾರೆ.**

## ಬರಲಿರುವ ಪರ್ವದಿನಗಳು

**ಶೋಭಕೃತನಾಮ ಸಂವತ್ಸರದ**
**ಫಾಲ್ಗುಣಮಾಸ ಶುಕ್ಲಪಕ್ಷ ನವಮಿಯಿಂದ ಚೈತ್ರಮಾಸ ಶುಕ್ಲಪಕ್ಷ ಅಷ್ಟಮಿಯವರೆಗೆ**

ಫಾಲ್ಗುಣ ಮಾಸ:
- ಮಾ. 18 ಸೋಮ-ನವಮಿ-ಆರಿದ್ರಾ
- ಮಾ. 19 ಮಂಗಳ-ದಶಮಿ-ಪುನರ್ವಸು
- ಮಾ. 20 ಬುಧ-ಏಕಾದಶಿ-ಪುಷ್ಯ
- ಮಾ. 21 ಗುರು-ದ್ವಾದಶಿ-ಆಶ್ಲೇಷಾ
- ಮಾ. 22 ಶುಕ್ರ-ತ್ರಯೋದಶಿ-ಮಘ
- ಮಾ. 23 ಶನಿ-ತ್ರಯೋದಶಿ-ಪೂರ್ವಾ
- ಮಾ. 25 ಸೋಮ-ಹುಣ್ಣಿಮೆ-ಉತ್ತರ
- ಮಾ. 26 ಮಂಗಳ-ಪ್ರತಿಪದ-ಹಸ್ತ
- ಮಾ. 27 ಬುಧ-ಬಿದಿಗೆ-ಚಿತ್ತ
- ಮಾ. 28 ಗುರು-ತದಿಗೆ-ರೇವತಿ
- ಮಾ. 29 ಶುಕ್ರ-ಚತುರ್ಥಿ-ವಿಶಾಖ, ಶ್ರೀಕ್ಷೇತ್ರ ಹೊಂಬುಜದಲ್ಲಿ ಧ್ವಜಾರೋಹಣ, ನಾಗವಾಹನೋತ್ಸವ.
- ಮಾ. 30 ಶನಿ-ಪಂಚಮಿ-ಅನುರಾಧ, ಶ್ರೀಕ್ಷೇತ್ರ ಹೊಂಬುಜದಲ್ಲಿ ಸಿಂಹವಾಹನೋತ್ಸವ.
- ಮಾ. 31 ಭಾನು-ಷಷ್ಠಿ-ಜ್ಯೇಷ್ಠಾ, ಶ್ರೀಕ್ಷೇತ್ರ ಹೊಂಬುಜದಲ್ಲಿ ಬೆಳ್ಳಿ/ ಪುಷ್ಪರಥೋತ್ಸವ
- ಏ. 01 ಸೋಮ-ಸಪ್ತಮಿ-ಮೂಲ, ಶ್ರೀಕ್ಷೇತ್ರ ಹೊಂಬುಜದಲ್ಲಿ ಮಹಾರಥೋತ್ಸವ,
- ಏ. 02 ಮಂಗಳ-ಅಷ್ಟಮಿ-ಪೂ.ಷಾ. ಹೊಂಬುಜ ಕ್ಷೇತ್ರದ ಭ॥ಪಾರ್ಶ್ವನಾಥ ಸ್ವಾಮಿಗೆ 108 ಕಲಶಗಳಿಂದ ಮಹಾಭೀಷೇಕ, ಸಂಘ ಪೂಜೆ.
- ಏ. 03 ಬುಧ-ನವಮಿ-ಉ.ಷಾ. ಹೊಂಬುಜದಲ್ಲಿ ಕುಂಕುಮೋತ್ಸವ, ಧ್ವಜಾವರೋಹಣ.
- ಏ. 08 ಸೋಮ-ಅಮವಾಸ್ಯೆ-ಉ.ಭಾ. ಯುಗಾದಿ ಅಮವಾಸ್ಯೆ

ಚೈತ್ರ ಮಾಸ:
- ಏ. 09 ಮಂಗಳ-ಪ್ರತಿಪದ-ರೇವತಿ-ಅಶ್ವಿನಿ, ಹೊಂಬುಜ ಕ್ಷೇತ್ರದಲ್ಲಿ ವಿಶೇಷ ಪೂಜೆ, ಬೆಳಿಗ್ಗೆ 5 ಗಂಟೆಗೆ ಭ॥ ಪಾರ್ಶ್ವನಾಥ ಸ್ವಾಮಿಯ ಶ್ರೀಮುಖ ದರ್ಶನ, ಯುಗಾದಿ.
- ಏ. 10 ಬುಧ-ಬಿದಿಗೆ-ಅಶ್ವಿನಿ
- ಏ. 11 ಗುರು-ತದಿಗೆ-ಕೃತಿಕಾ
- ಏ. 12 ಶುಕ್ರ-ಚತುರ್ಥಿ-ರೋಹಿಣಿ
- ಏ. 13 ಶನಿ-ಚತುರ್ಥಿ-ರೋಹಿಣಿ
- ಏ. 14 ಭಾನು-ಷಷ್ಠಿ-ಆರಿದ್ರಾ
- ಏ. 15 ಸೋಮ-ಸಪ್ತಮಿ-ಆರಿದ್ರಾ
- ಏ. 16 ಮಂಗಳ-ಅಷ್ಟಮಿ-ಪುಷ್ಯ.

## ಶ್ರೀ ಹೊಂಬುಜ ಕ್ಷೇತ್ರದಲ್ಲಿ ವಾರ್ಷಿಕ ರಥಯಾತ್ರಾ ಮಹೋತ್ಸವ-2024

**ಧರ್ಮಬಂಧುಗಳೇ,**

**ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಪರಂಪರಾನುಗತವಾಗಿ ನಡೆದು ಬಂದಿರುವ ಭಗವಾನ್ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ರಥೋತ್ಸವವು ಮಾರ್ಚ್ 29 ರಿಂದ ಏಪ್ರಿಲ್ 03ರವರೆಗೆ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಜರುಗಲಿವೆ.**

**ಶೋಭನಕೃತ ನಾಮ ಸಂವತ್ಸರದ ಫಾಲ್ಗುಣಮಾಸ ಕೃಷ್ಣಪಕ್ಷ ಚತುರ್ಥಿಯಿಂದ ನವಮಿಯವರೆಗೆ ನೆರವೇರಲಿದೆ. ಮಾರ್ಚ್ 25 ರಿಂದ 28ರವರೆಗೆ ಕ್ಷೇತ್ರದ ವಿವಿಧ ಬಸದಿಗಳಲ್ಲಿ ವಿಶೇಷ ಆರಾಧನೆಗಳು ಜರುಗಲಿವೆ. ಮಾರ್ಚ್-29 ಧ್ವಜಾರೋಹಣ, ನಾಗವಾಹನೋತ್ಸವ, ಮಾ. 30-ಸಿಂಹವಾಹನೋತ್ಸವ, ಮಾ. 31 ಬೆಳ್ಳಿ-ಪುಷ್ಪರಥೋತ್ಸವ, ಏ. 01 ಮೂಲಾನಕ್ಷತ್ರದಂದು (ಮಧ್ಯಾಹ್ನ 1-05) ಮಹಾರಥೋತ್ಸವ, ಏ. 02 ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಗೆ 108 ಕಲಶಗಳ ಮಹಾಭಿಷೇಕ ಮತ್ತು ಸಂಘ ಪೂಜೆ, ಏ. 03 ಕುಂಕುಮೋತ್ಸವ ಮತ್ತು ಧ್ವಜಾವರೋಹಣದೊಂದಿಗೆ ಸಂಪನ್ನಗೊಳ್ಳಲಿದೆ. ಮಾ. 31 ರಂದು ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.**

**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಾಗೂ ವಾರ್ಷಿಕ ರಥಯಾತ್ರಾ ಮಹೋತ್ಸವದಲ್ಲಿ ಧರ್ಮ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷೆ.**

**ಆಡಳಿತಾಧಿಕಾರಿಗಳು. ಶ್ರೀ ಹೊಂಬುಜ ಜೈನ ಮಠ.**

**ದೂ. 08185-262722, ಮೊ: ಸೇವೆ: 9481453653, ವಸತಿ: 9483801460**



ಮೂಡುಬಿದರೆ ಧರ್ಮನುರಾಗಿಗಳಾದ ಶ್ರೀ ಪ್ರಭಾಚಂದ್ರ ಶೆಟ್ಟಿ ಮತ್ತು ಶ್ರೀಮತಿ ಛಾಯಾ ಪ್ರಭಾಚಂದ್ರ ಶೆಟ್ಟಿ ಇವರ ಮೊಮ್ಮಗಳಾದ ಕುಮಾರಿ ಅನನ್ಯಾ ಭರತೇಶ್ ನಗರೇಶ್ವರ (ಶೆಟ್ಟಿ) ಅಮೇರಿಕದ ಚಿಕಾಗೋ ನಗರದಲ್ಲಿ ವಾಸಿಸುತ್ತಿದ್ದು, ವೈದ್ಯಕೀಯ ಶಿಕ್ಷಣದ ಪ್ರವೇಶ ಪರೀಕ್ಷೆಯನ್ನು ಮೇರಿಟನಲ್ಲಿ ಉತ್ತೀರ್ಣ ಮಾಡಿದ್ದು, ಅಮೇರಿಕಾದ ಪ್ರತಿಷ್ಠಿತ ಡೀಫಾಲ್ ಯುನಿವರ್ಸಿಟಿಯಲ್ಲಿ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡಲು ಪ್ರವೇಶ ಪಡೆದಿರುತ್ತಾಳೆ. ಕುಮಾರಿ ಅನನ್ಯಾ ಸತತ 12 ವರ್ಷಗಳ ಕಾಲ ಭರತನಾಟ್ಯ ವನ್ನು ಕಲಿತು ಕಳೆದ ಜುಲೈ ನಲ್ಲಿ ಭರತನಾಟ್ಯ ರಂಗಪ್ರವೇಶ ಮಾಡಿರುತ್ತಾಳೆ. ಜೈನ್ ಮಿಲನ್ ಅಮೇರಿಕಾದ ಅನೇಕ ಕಾರ್ಯಕ್ರಮಗಳಲ್ಲಿ ನಿರೂಪಕಿಯಾಗಿ ಅಲ್ಲಿನ ಜಿನಮಂದಿರದ ಸಕಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾಳೆ.

## ಬಾಹುಬಲಿ ಸ್ವಾಮಿಗೆ ಶತಮಾನದ 3ನೇ ಮಹಾಮಸ್ತಕಾಭಿಷೇಕ ಸಂಪನ್ನ

# "ಜೈನ ಧರ್ಮದ ಕೊಡುಗೆ ಅಪಾರ"

-ಸಚಿವ ದಿನೇಶ್ ಗುಂಡೂರಾವ್



**ವೇಣೂರು :** ಜೈನ ಧರ್ಮ ಸಮಾಜ ಬೆಳಗಲು ಕಾರಣವಾಗಿದೆ. ಅವರ ಸಂಪ್ರದಾಯ, ಸಿದ್ಧಾಂತಗಳು ರಾಜ್ಯ ವ್ಯಾಪಿ ಪಸರಿಸಿದ್ದು, **ಪ್ರಭಾವಶಾಲಿ ವ್ಯವಸಾಯ, ವ್ಯವಹಾರಗಳಿಗೆ ಕಾರಣವಾಗಿದೆ, ಹಲವಾರು ಸಂಸ್ಕೃತಿ, ಪದ್ಧತಿ ಪರಂಪರೆಯ ಮಿಶ್ರಣ ಹೊಂದಿರುವ ದೇಶದ ಎಲ್ಲ ಕ್ಷೇತ್ರಗಳಲ್ಲಿ ಜೈನ ಧರ್ಮದ ಕೊಡುಗೆ ಅಪಾರವಾಗಿದೆ** ಎಂದು ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್‌ರವರು ವೇಣೂರು ಭಗವಾನ ಶ್ರೀ ಬಾಹುಬಲಿ ಸ್ವಾಮಿಯ ಮಸ್ತಕಾಭಿಷೇಕ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, **"ಮಾನವ ಎಷ್ಟೇ ದೊಡ್ಡವನಾದರೂ ಆತ ದೇವರ ಎದುರು ಕುಬ್ಜ. ಅಹಂಕಾರ, ಭಾವನೆಗಳನ್ನು ದೇವರು ಬದಲಾಯಿಸಿ ನಾವು ಸಾಮಾನ್ಯರಾಗಬೇಕು. ನಮ್ಮಿಂದ ಬಾಹುಬಲಿಯ ವ್ಯಕ್ತಿತ್ವವಾಗಲು ಸಾಧ್ಯವಿಲ್ಲ. ಆದರೆ ಅವರ ಆದರ್ಶ, ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರತಿಬಿಂಬವಾಗುವ ಮೂಲಕ ಪವಿತ್ರರಾಗಬಹುದು. ಜೀವನದಲ್ಲಿ ಆದರ್ಶಗಳನ್ನು ಪಾಲಿಸುವ ಜೈನರಿಗೆ ಸಮಾಜದಲ್ಲಿ ವಿಶೇಷ ಗೌರವವಿದೆ. ಅದನ್ನು ಇನ್ನಷ್ಟು ಎತ್ತರಕ್ಕೇರಿಸುವ ಅಗತ್ಯವಿದ್ದು, ಮಹಾಮಸ್ತಕಾಭಿಷೇಕ ದಾರಿದೀಪವಾಗಲಿ"** ಎಂದರು.

ಮೂಡುಬಿದಿರೆ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಮಾತನಾಡಿ, **ದಾನಕ್ಕೆ ಧರ್ಮಸ್ಥಳ, ದಯೆಗೆ ಮುನಿಗಳು, ಧರ್ಮಕ್ಕೆ ಶಾಸ್ತ್ರವನ್ನು ನೋಡಬೇಕು. ಈ ಮೂರನ್ನು ಎತ್ತಿ ತೋರಿಸುವಲ್ಲಿ ಮಹಾಮಸ್ತಕಾಭಿಷೇಕ ಸಫಲವಾಗಿದೆ** ಎಂದರು.

### ಶ್ರೀಕ್ಷೇತ್ರ ಧರ್ಮಸ್ಥಳದಿಂದ ಭಕ್ತಿಯ ಸೇವೆ:

ಭಗವಾನ ಬಾಹುಬಲಿ ಮಹಾಮಸ್ತಕಾಭಿಷೇಕದ ಎಂಟನೇ ದಿನವಾದ ಗುರುವಾರ ಶ್ರೀಕ್ಷೇತ್ರ ಧರ್ಮಸ್ಥಳದ ಡಾ. ಡಿ. ವೀರೇಂದ್ರ ಹೆಗ್ಗಡೆ, ಶ್ರೀಮತಿ ಹೇಮಾವತಿ ವೀ. ಹೆಗ್ಗಡೆ ಮತ್ತು ಕುಟುಂಬಸ್ಥರ ವತಿಯಿಂದ ನಿತ್ಯ ವಿಧಿ ಸಹಿತ ಆಹಾರ ದಾನ ವಿಧಿ, ಗಂಧ ಯಂತ್ರಾರಾಧನಾ ವಿಧಾನ, ಮಂತ್ರನ್ಯಾಸ ಪೂರ್ವಕ ಕೇವಲ ಜ್ಞಾನ ಕಲ್ಯಾಣ, ಅಗ್ರೋದಕ ಮೆರವಣಿಗೆ ನಡೆದು ಸಂಜೆ 504 ಕಲಶಗಳಿಂದ ಮಹಾಮಸ್ತಕಾಭಿಷೇಕ ನಡೆಯಿತು.

WWW.HOMBUJAPADMAVATI.ORG

### ಗೌರವಾರ್ಪಣೆ:

ಸಮಿತಿ ಕಾರ್ಯಾಧ್ಯಕ್ಷ ಡಾ. ಪದ್ಮಪ್ರಸಾದ ಅಜಿಲ, ಕಾರ್ಯದರ್ಶಿ ಪ್ರವೀಣ ಕುಮಾರ್ ಇಂದ್ರ, ಮಾಜಿ ಸಚಿವ ಅಭಯಚಂದ್ರ ಜೈನ್, ಅಟ್ಟಳಿಗೆ ನಿರ್ಮಿಸಿದ ಮಹಾವೀರ ಪ್ರಸಾದ್, ಮಹಾಪದ್ಮಪ್ರಸಾದ್, ಸ್ಟ್ರಕ್ಚರ್ ಎಂಜಿನಿಯರ್ ಅನಿಲ್ ಹೆಗಡೆ, ಸನತ್ ಕುಮಾರ್, ಕಲ್ಲುಬಸದಿಯ ತಡೆಗೋಡೆ ನಿರ್ಮಾಣಕ್ಕೆ ಸಹಕಾರ ನೀಡಿದ ಸಂದೀಪ್ ಜೈನ್, ಎಂಆರ್‌ಪಿಎಲ್‌ನ ಸ್ವಾಮಿ ಪ್ರಸಾದ್ ಮೂಡುಬಿದಿರೆ, ನಾಸಿಕ್‌ನ ಉದ್ಯಮಿ ರವಿಂದ್ರ ಪಾಟೀಲ್ ಅವರನ್ನು ಗೌರವಿಸಲಾಯಿತು.

ಒಂಬತ್ತು ದಿನಗಳಿಂದ ವೇಣೂರು ಭಗವಾನ ಬಾಹುಬಲಿಗೆ ನಡೆದ ಶತಮಾನದ ಮೂರನೇ ಮಹಾಮಸ್ತಕಾಭಿಷೇಕ ಸಕಲ ವೈಭವಗಳೊಂದಿಗೆ ಸಂಪನ್ನಗೊಂಡಿತು. ಫೆ. 21ರಂದು ಯುಗಳ ಮುನಿಗಳ ಪುರಪ್ರವೇಶದೊಂದಿಗೆ ಆರಂಭವಾದ ಕಾರ್ಯಕ್ರಮ ಹತ್ತಾರು ವಿಶೇಷ ದ್ರವ್ಯಗಳಿಂದ ಬಾಹುಬಲಿ ಮಹಾಮಸ್ತಕಾಭಿಷೇಕ ನಡೆಯಿತು. ಅಂತಿಮ ದಿನದಂದು ನಿತ್ಯವಿಧಿ ಸಹಿತ ಅಗ್ರೋಧಕ ಮೆರವಣಿಗೆ ಸಮಿತಿ ವತಿಯಿಂದ 1008 ಕಲಶ ಮಹಾಮಸ್ತಕಾಭಿಷೇಕ, ಸಂಘಪೂಜೆ, ಕುಂಕುಮೋತ್ಸವ, ಧ್ವಜಾರೋಹಣ ನಡೆಯಿತು. ಮೂಡುಬಿದಿರೆಯ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಗಳವರ ನೇತೃತ್ವ, ಸಕಲ ಜೈನ ಮಠಗಳ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ, ಅಳದಂಗಡಿ ಅರಮನೆಯ ತಿಮ್ಮಣ್ಣರಸರಾದ ಡಾ. ಪದ್ಮಪ್ರಸಾದ್ ಅಜಿಲರ ಕಾರ್ಯಾಧ್ಯಕ್ಷತೆ ಹಾಗೂ ಸಮಿತಿ ಸದಸ್ಯರ ಸಹಕಾರದಲ್ಲಿ ಸಕಲ ವ್ಯವಸ್ಥೆಗಳೊಂದಿಗೆ ನಡೆದ ಸಮಾರಂಭದಲ್ಲಿ ಲಕ್ಷಾಂತರ ಮಂದಿ ಭಾಗಿಯಾಗಿದ್ದರು. ರಾಜ್ಯದ ದೇಶದ ನಾನಾ ಮೂಲೆಗಳಿಂದ ಭಕ್ತರು ಆಗಮಿಸಿದ್ದರು.

# ವಿದ್ಯಾರ್ಥಿ ನಿಲಯ ಉದ್ಘಾಟನೆ



ಮಂಗಳೂರು : ಶತಮಾನ ಪೂರೈಸಿದ ಲಾರ್ಡ್ ಮಹಾವೀರ ವಿದ್ಯಾರ್ಥಿ ನಿಲಯದ ನೂತನ ವಸತಿ ನಿಲಯದ ಕಟ್ಟಡದ ಪ್ರವೇಶೋತ್ಸವವು ಮುನಿಶ್ರೀ ಅಮೋಘಕೀರ್ತಿ ಮತ್ತು ಮುನಿಶ್ರೀ ಅಮರಕೀರ್ತಿ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ ಮಾ. 7 ರಂದು ನೆರವೇರಿತು. ಸ್ವರ್ಗಿಯ ಮಲ್ಲಬಟ್ಟು ನೇಮಿರಾಜ ಪಡಿವಾಳರವರು 40 ಸೆಂಟ್ಸ್ ಜಮೀನು ದಾನ ಮಾಡಿ, ಗ್ರಾಮೀಣ ಪ್ರದೇಶದ ವಿದ್ಯಾಕಾಂಕ್ಷಿ ಜೈನ ಸಮುದಾಯದವರಿಗೆ ಅನುಕೂಲತೆ ಕಲ್ಪಿಸಲು ವಿದ್ಯಾರ್ಥಿ ನಿಲಯವನ್ನು 1917 ರಲ್ಲಿ ನಿರ್ಮಿಸಿದ್ದಾರೆ. ಇದೀಗ 20 ಕೊಠಡಿಗಳುಳ್ಳ ವಸತಿ ನಿಲಯ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯವಿದ್ದು ವ್ಯಾಸಂಗ ಮಾಡಿದ್ದ ಹಿರಿಯರ ಸ್ಮರಣೆಗಾಗಿ ದಾನಿಗಳ ಸಹಕಾರದಿಂದ ಲೋಕಾರ್ಪಣೆಗೊಂಡಿದೆ.

ಮೂಡುಬಿದಿರೆ ಜೈನ ಮಠದ ಪರಮಪೂಜ್ಯ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಯವರು ಮಾತನಾಡಿ, ಸಮುದಾಯದ ಹಿರಿಯರು ಮಾಡಿರುವ ಮಾದರಿ ಕಾರ್ಯಗಳು ಇಂದಿನ ತಲೆಮಾರಿಗೆ ಆದರ್ಶವಾಗಲಿ ಎಂದರು.

# ವಡನ್‌ಬೈಲಿನಲ್ಲಿ ವೈಭವದ ಪಂಚಕಲ್ಯಾಣ ಮಹಾಮಹೋತ್ಸವ




**ವಡನ್‌ಬೈಲು :** ವಿಶ್ವವಿಖ್ಯಾತ ಜೋಗ ಜಲಪಾತದ ತಪ್ಪಲಿನಲ್ಲಿರುವ ಶರಾವತಿ ಕಣಿವೆಯ ಪ್ರಕೃತಿಯ ತಾಣದ ವಡನ್‌ಬೈಲಿನಲ್ಲಿ ಮಾರ್ಚ್ 1ರಿಂದ 6ರವರೆಗೆ ವೈಭವದಿಂದ ಭಗವಾನ್ 1008 ಶ್ರೀ ಪಾರ್ಶ್ವನಾಥ ಸ್ವಾಮಿತೀರ್ಥಂಕರರ ಪಂಚಕಲ್ಯಾಣ ಮಹಾಮಹೋತ್ಸವವುಅತ್ಯಂತ ವೈಭವದಿಂದ ನೆರವೇರಿತು.

ಪರಮಪೂಜ್ಯ ಅಭೀಕ್ಷ್ಣಜ್ಞಾನಭಾಸ್ಕರ, ವಾತ್ಸಲ್ಯಮೂರ್ತಿ ಮುನಿಶ್ರೀ 108 ಪುಣ್ಯಸಾಗರ ಮಹಾರಾಜರ ಪಾವನ ಸಾನ್ನಿಧ್ಯ ಹಾಗೂ ಸ್ವಾದಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ಸಕಲ ಜೈನ ಮಠಗಳ ಭಟ್ಟಾರಕ ಮಹಾಸ್ವಾಮೀಜಿಗಳವರ ಮಾರ್ಗದರ್ಶನದಲ್ಲಿ ಧರ್ಮದರ್ಶಿಗಳಾದ ಹೆಚ್.ಎಂ. ವೀರರಾಜಯ್ಯ ಜೈನ್ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ನೆರವೇರಿತು.

**ಜಗತ್ತಿನ ಅತ್ಯಂತ ಪ್ರಾಚೀನ ಧರ್ಮ ಜೈನಧರ್ಮವಾಗಿದೆ. ಜೈನಧರ್ಮಕ್ಕೆ ಪ್ರಾಚೀನ ಇತಿಹಾಸವಿದೆ** ಎಂದು ಸೋಂದ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಸ್ವಾಮಿಗಳು ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದರು.

ಧರ್ಮ ಸಂಸ್ಕಾರ ಇಲ್ಲದ ಮನುಷ್ಯನ ಬದುಕು ಶೂನ್ಯ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಪಂಚಕಲ್ಯಾಣ ಮಹಾಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿ, **ಜಗತ್ತಿನ ಆರಂಭದ ಧರ್ಮವೆ ಜೈನ ಧರ್ಮವಾಗಿದೆ. ಇದು ಜೀವ ಪರವಾದ ಧರ್ಮವಾಗಿದ್ದು ನೀನು ಬದುಕು ಬದುಕಲು ಬಿಡು ಎಂದು ಸಾರಿದ ಧರ್ಮವಾಗಿದೆ. ಒಳ್ಳೆಯ ಮನಸ್ಸಿನಿಂದ ಬದುಕಿದಲ್ಲಿ ನಿರಂತರ ಒಳ್ಳೆಯದೇ ಆಗುತ್ತದೆ. ಧರ್ಮ ಮಾರ್ಗದಲ್ಲಿ ನಡೆಯುವ ಮೂಲಕ ಜಗದ ಶಾಂತಿ ನೆಲೆಸುವಂತಾಗಬೇಕು** ಎಂದರು.

# "ಜಗತ್ತಿನಲ್ಲಿ ಜೈನಧರ್ಮಕ್ಕೆ ಶ್ರೇಷ್ಠತೆ ಇದೆ"

-ಶಾಸಕ ಗೋಪಾಲಕೃಷ್ಣ ಬೇಳೂರು



ವಡನ್‌ಬೈಲು : ಜಗತ್ತಿನಲ್ಲಿ ಜೈನ ದರ್ಮಕ್ಕೆ ಶ್ರೇಷ್ಠತೆ ಇದೆ ಎಂದು ಕರ್ನಾಟಕ ಅರಣ್ಯ ಉತ್ಪನ್ನಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಗೋಪಾಲಕೃಷ್ಣ ಬೇಳೂರು ಹೇಳಿದರು. ಅವರುಇಲ್ಲಿಗೆ ಸಮೀಪದ ವಡನ್‌ಬೈಲ್‌ನಲ್ಲಿ ಆಯೋಜಿಸಿದ್ದ ಪಂಚಕಲ್ಯಾಣ ಮಹಾಮಹೋತ್ಸವ ಕೊನೆಯ ದಿನವಾದ ಸಮಾರೋಪ ಸಮಾರಂಭದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಮುನಿಶ್ರೀ 108 ಪುಣ್ಯಸಾಗರರು ಆಶೀರ್ವಚನ ನೀಡಿ ಇಂದಿನ ದಿನಗಳಲ್ಲಿ ಕೇಬಲ್ ಜ್ಞಾನಗಳು ಹೆಚ್ಚುತ್ತಿದೆ. ಅದರ ಬದಲು ಜನರು ಕೇವಲ ಜ್ಞಾನದಲ್ಲಿ ಗಮನ ಹರಿಸಬೇಕಾಗಿದೆ. ಧರ್ಮವನ್ನು ನಿತ್ಯಲೂ ಸ್ವಾಧ್ಯಾಯ ಮಾಡುವ ಮೂಲಕ ಅದರತತ್ವ ಆದರ್ಶಗಳನ್ನು ಪಾಲಿಸುವ ಮೂಲಕ ಮಾನಸಿಕ ನೆಮ್ಮದಿಯನ್ನು ಪಡೆದುಕೊಳ್ಳುವ ಕೆಲಸ ಆಗಬೇಕಾಗಿದೆ. ಸ್ವಾರ್ಥದ ಬದುಕಿನಿಂದ ಹೊರ ಬಂದು ತೀರ್ಥಂಕರರ ಮಾರ್ಗವನ್ನು ಅನುಸರಿಸುವ ಮೂಲಕ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಎಲ್ಲಾ ಸ್ವಯಂ ಸೇವಕರನ್ನು ಸನ್ಮಾನಿಸಲಾಯಿತು. ಶ್ರೀಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿರುವ 12 ಅಡಿ ಎತ್ತರದ ಭವ್ಯ ಪಾರ್ಶ್ವನಾಥ ತೀರ್ಥಂಕರರ ಮೂರ್ತಿಗೆ 1008 ಕಳಶಗಳಿಂದ ಮಹಾ ಮಸ್ತಕಾಭಿಷೇಕ ನಡೆಸಲಾಯಿತು. ಭಾಗವಹಿಸಿದ್ದ ಶ್ರಾವಕ ಶ್ರಾವಕಿಯರು ಅಭಿಷೇಕ ಮಾಡುವ ಮೂಲಕ ಮಹಾಮಸ್ತಕಾಭಿಷೇಕವನ್ನು ಕಣ್ತುಂಬಿಕೊಂಡರು.

ರಾಜ್ಯ ಹಾಗೂ ಹೊರರಾಜ್ಯಗಳಿಂದ ಭಕ್ತರು ಭಾಗವಹಿಸಿದ್ದರು. ಆಕರ್ಷಕವಾದ ಆನೆಯ ಮೇಲೆ ತೀರ್ಥಂಕರರ ಮೂರ್ತಿಯ ಮೆರವಣಿಗೆ ಹಾಗೂ ರಥದ ಮೂಲಕ ಬರುವ ಮೆರವಣಿಗೆ ಜನರನ್ನು ಆಕರ್ಷಿಸಿತು. ಜಯಶ್ರೀ ಹೊರನಾಡು ಅವರ ಆರು ದಿನಗಳ ಧಾರ್ಮಿಕ ಗಾಯನಕ್ಕೆ ಭಾಗವಹಿಸಿದವರೆಲ್ಲರೂ ಸಂಭ್ರಮಿಸಿದರು. ಪ್ರತಿ ದಿನ ರಾತ್ರಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

## ವೇಣೂರು ಭಗವಾನ ಶ್ರೀ ಬಾಹುಬಲಿ ಸ್ವಾಮಿಗೆ ಮಹಾಮಸ್ತಕಾಭಿಷೇಕ ಸಂಭ್ರಮ

# "ಭರತನನ್ನೇ ಗೆದ್ದ ಬಾಹುಬಲಿ ವಿಶ್ವವಂದ್ಯನಾದ"

–ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ವೇಣೂರು:** ಉಪಾಧಿಗಳಿಂದ ಬಾಹುಬಲಿಯ ವ್ಯಕ್ತಿತ್ವದ ಸತ್ಯ ತಿಳಿಯಬಹುದು. **ಈ ಭೂಮಿಯಲ್ಲಿ ನೈತಿಕತೆ ಎಂಬುದು ಶಾಶ್ವತವಾಗಿರಬೇಕು ಎಂಬ ಸಂದೇಶ ಬಾಹುಬಲಿಯದ್ದು. ಹಾಗಾಗಿ ಈ ಭೂಮಿಯಲ್ಲಿ ಅಹಿಂಸೆಯನ್ನು ಪಾಲಿಸಿದವರು ಮಹಾವೀರನ ಸರ್ವೋದಯ ಪರಿಪಾಲಕರು** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ನುಡಿದರು.

ಫೆ. 22 ರಿಂದ ಮಾರ್ಚ್ 1ವರೆಗೆ ಫಲ್ಗುಣಿ ತಟದಲ್ಲಿ ವಿರಾಜಮಾನಾದ ಭಗವಾನ ಶ್ರೀ ಬಾಹುಬಲಿ ಸ್ವಾಮಿ ಮಸ್ತಕಾಭಿಷೇಕದ ಮೂರನೇ ದಿನವಾದ ಫೆ. 24ರಂದು ಭರತೇಶ ಸಭಾಭವನದಲ್ಲಿ ಯುಗಳ ಮುನಿಗಳ ದಿವ್ಯ ಉಪಸ್ಥಿತಿಯಲ್ಲಿ ಆಯೋಜಿಸಿದ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದರು.

ಜೈನ ಧರ್ಮವನ್ನು ಉಳಿಸುವುದರ ಜತೆಗೆ ಅದರ ತತ್ವ ಸಿದ್ಧಾಂತಗಳನ್ನು ನಿತ್ಯವೂ ಪಾಲಿಸುವುದು ಮುಖ್ಯ. ಅಹಿಂಸೆ ಮತ್ತು ಅನೇಕಾಂತದಿಂದ ಇಂದಿನ ಎಲ್ಲ ಸಮಸ್ಯೆಗಳನ್ನು ಸುಲಭದಲ್ಲಿ ಪರಿಹರಿಸಿದಲ್ಲಿ ವಿಶ್ವಕ್ಕೆ ಸುಖ-ಶಾಂತಿ-ನೆಮ್ಮದಿ ಲಭಿಸುವುದು. ಅಹಿಂಸೆ,ತ್ಯಾಗದ ಮಹತ್ವಕ್ಕಾಗಿ ನಾವು ಬಾಹುಬಲಿಯನ್ನು ಶ್ರದ್ಧಾ-ಭಕ್ತಿಯಿಂದ ಆರಾಧಿಸುತ್ತೇವೆ. ಚಕ್ರವರ್ತಿ ಭರತನನ್ನೇ ಗೆದ್ದ ಬಾಹುಬಲಿ ಮಹಾಚಕ್ರವರ್ತಿಯಾಗಿ ವಿಶ್ವವಂದ್ಯ ಎಂದು ಅಭಿಪ್ರಾಯಪಟ್ಟರು.

ಮೂಡುಬಿದಿರೆ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಮಾತನಾಡಿ, ಜೈನ ಧರ್ಮ ಶ್ರೇಷ್ಠ ವಿಶ್ವಧರ್ಮವಾಗಿದ್ದು, ಅದರ ಎಲ್ಲ ತತ್ವಸಿದ್ಧಾಂತಗಳು ವೈಜ್ಞಾನಿಕವಾಗಿಯೂ ಸತ್ಯ ಮತ್ತು ಪರಿಪೂರ್ಣ ಎಂದು ಖಚಿತವಾಗಿದೆ ಎಂದರು.

WWW.HOMBUJAPADMAVATI.ORG

ಪತ್ರಕರ್ತ ಅಜಿತ ಹನುಮಕ್ಕನವರ್ ಜಿನಸಿದ್ಧಾಂತದ ಶ್ರೇಷ್ಠತೆ-ಅನೇಕಾಂತವಾದದ ಬಗ್ಗೆ ಉಪನ್ಯಾಸ ನೀಡಿದರು. ಶಾಸಕ ಹರೀಶ ಪೂಂಜ, ಪೋಲೀಸ್ ವರಿಷ್ಠಾಧಿಕಾರಿ ಜಿನೇಂದ್ರ ಕಣಗಾವಿ, ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್, ವಕೀಲ ಪಿ.ಪಿ. ಹೆಗ್ಡೆ, ಎಚ್.ಪಿ.ಸಿ.ಎಲ್.ನ ನವೀನ್ ಕುಮಾರ್ ಇದ್ದರು. ಕಾರ್ಯಾಧ್ಯಕ್ಷ ತಿಮ್ಮಣ್ಣರಸರಾದ ಡಾ। ಪದ್ಮಪ್ರಸಾದ್ ಅಜಿಲ ಮತ್ತು ಪ್ರಧಾನ ಕಾರ್ಯದರ್ಶಿ ವಿ. ಪ್ರವೀಣ ಕುಮಾರ್ ಇಂದ್ರ ಉಪಸ್ಥಿತರಿದ್ದರು. ಡಾ. ಶಾಂತಿಪ್ರಸಾದ್ ಸ್ವಾಗತಿಸಿದರು. ಶಾಲಿನಿ ನಿರಂಜನ್ ವಂದಿಸಿದರು. ನಮಿತಾ ಜೈನ್ ನಿರ್ವಹಿಸಿದರು.

# ಮೂಡುಬಿದಿರೆಗೆ ಹೊಂಬುಜ ಶ್ರೀಗಳ ಭೇಟಿ



**ಮೂಡುಬಿದಿರೆ :** ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾ ಸ್ವಾಮೀಜಿಯವರು ಇಲ್ಲಿಯ ಜೈನ ಮಠಕ್ಕೆ ಭೇಟಿ ನೀಡಿದರು. ಮೂಡುಬಿದಿರೆ ಶ್ರೀಗಳವರನ್ನು ಭೇಟಿಯಾಗಿ, ವಿಚಾರ ವಿನಿಮಯ ಮಾಡಿಕೊಂಡರು. ಶ್ರೀಮಠದ ವ್ಯವಸ್ಥಾಪಕ ಸಂಜಯಂತ ಕುಮಾರ್ ಶೆಟ್ಟಿ ಸ್ವಾಗತಿಸಿದರು.

ಅಮ್ಮನವರ ಬಸದಿಗೆ ತೆರಳಿ ಭಗವಾನ ಶ್ರೀ ಶಾಂತಿನಾಥ ಸ್ವಾಮಿ 24 ತೀರ್ಥಂಕರರ, ಸರಸ್ವತಿ ದೇವಿ, ಯುಗಳ ಮುನಿವರ್ಯರ, ಮಾತೆ ಯಕ್ಷಿ ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಮಾಡಿ ರಥೋತ್ಸವದಲ್ಲಿ ಪಾಲ್ಗೊಂಡರು. ಬಸದಿ ಮುಕ್ತೇಸರರಾದ ಪಟ್ಲ ಶೆಟ್ಟಿ ಸುದೇಶ್ ಕುಮಾರ್, ದಿನೇಶ್ ಕುಮಾರ್, ರಾಜವರ್ಮ ಬೈಲಂಗಡಿ, ಆಡಳಿತದಾರ ಭಾಸ್ಕರ ಕಟ್ಟೇಮಾರ್, ಶಂಭವ್ ಕುಮಾರ್, ಮಾಜಿ ಸಚಿವ ಅಭಯಚಂದ್ರ ಜೈನ್, ಬಾಹುಬಲಿ ಪ್ರಸಾದ್ ಇದ್ದರು.

## ವರಂಗ ರಥೋತ್ಸವ

# "ಶಾಂತಿ-ಸೌಹಾರ್ದತೆಯ ಪ್ರತೀಕ ರಥೋತ್ಸವ"

–ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ವರಂಗ :** **"ಧಾರ್ಮಿಕ ಕ್ಷೇತ್ರದಲ್ಲಿನ ವಾರ್ಷಿಕ ಪೂಜೆ, ಆರಾಧನೆ-ಉತ್ಸವಗಳಲ್ಲಿ ಇಡೀ ಸಮಾಜವೇ ಸಂಭ್ರಮಿಸಿ, ಸಂತೋಷಗೊಳ್ಳುವ ವಿಶಿಷ್ಠ ಸಾಮೂಹಿಕ ಹಬ್ಬ ಜಾತ್ರೆ. ಈ ದಿನಗಳಲ್ಲಿ ವ್ಯಕ್ತಿ-ವ್ಯಕ್ತಿಗಳ ಪರಿಚಯ, ಬಾಂಧವ್ಯ ವೃದ್ಧಿಗೊಂಡು ಧಾರ್ಮಿಕ ನೆಲೆಯಲ್ಲಿ ಶಾಂತಿ-ಸೌಹಾರ್ದತೆಗೆ ಕಾರಣವಾಗುತ್ತದೆ"** ಎಂದು ಹೊಂಬುಜದ ಪರಮಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ವರಂಗದ ಭಗವಾನ್ ಶ್ರೀ 1008 ನೇಮಿನಾಥ ಸ್ವಾಮಿ ಹಾಗೂ ಶ್ರೀಪದ್ಮಾವತಿ ಅಮ್ಮನವರ ಸನ್ನಿಧಿಯಲ್ಲಿ ಫೆ. 27ರ ಮಂಗಳವಾರದಂದು ನೆರವೇರಿದ ವಾರ್ಷಿಕ ರಥಯಾತ್ರಾ ಮಹೋತ್ಸವದಲ್ಲಿ ಸಾನಿಧ್ಯ ನೀಡಿ ಆಶೀರ್ವಚಿಸಿದರು.

5 ದಿನಗಳ ಕಾಲ ನಡೆದ ಮಹೋತ್ಸವದಲ್ಲಿ ಫೆ. 24ರಂದು ಇಂದ್ರ ಪ್ರತಿಷ್ಠೆ, ವಿಮಾನಶುದ್ಧಿ, ಧ್ವಜಾರೋಹಣ, ಫೆ. 25ರಂದು ನಿತ್ಯವಿಧಿ, ಫೆ. 26 ಪುಷ್ಪರಥೋತ್ಸವ, ಫೆ. 27 ರಂದು ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರಿಗೆ ಮಹಾನ್ಯೆವೇದ್ಯ ಪೂಜೆ, ಪ್ರಸಾದ ಬೇಡಿಕೆ, ಹಸ್ತಾನಕ್ಷತ್ರದಲ್ಲಿ ಮಹಾರಥೋತ್ಸವ, ಫೆ. 28ರಂದು ಕುಂಕುಮೋತ್ಸವ, ಅವಭೃತಸ್ನಾನ, ಧ್ವಜಾವರೋಹಣ, ಶ್ರೀಕ್ಷೇತ್ರಪಾಲ ಪೂಜೆ ಈ ಎಲ್ಲಾ ಧಾರ್ಮಿಕ ವಿಧಾನಗಳು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ಪೂರ್ವ ಪರಂಪರೆಯಂತೆ ಜರುಗಿದವು. ಊರ ಹಾಗೂ ಪರವೂರ ಭಕ್ತವೃಂದದವರು ಶ್ರದ್ಧಾಭಕ್ತಿಯಲ್ಲಿ ಪಾಲ್ಗೊಂಡು ಆತ್ಮ ಸಂಭ್ರಮವನ್ನು ಹೊಂದಿದರು.

# ಜಿನಬಿಂಬ ಪ್ರತಿಷ್ಠಾ ಮಹೋತ್ಸವ



**ಮೂಡುಬಿದರೆ:** ಹಿರೇಅಮ್ಮನವರ ಬಸದಿ ಎಂದೇ ಪ್ರಸಿದ್ಧವಾಗಿರುವ ಶ್ರೀ ಶಾಂತಿನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ, ಶ್ರೀ ಸರಸ್ವತಿ ದೇವಿ ಹಾಗೂ ಇಪ್ಪತ್ತನಾಲ್ಕು ತೀರ್ಥಂಕರರ ಜಿನಬಿಂಬಗಳ ದರ್ಶನವನ್ನು ಹೊಂಬುಜ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಯವರು ಪಡೆದರು. ಶ್ರೀ ಕ್ಷೇತ್ರಪಾಲ, ಶ್ರೀ ನಾಗಸನ್ನಿಧಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ಬಸದಿಯ ಆಡಳಿತದಾರರಾದ ಭಾಸ್ಕರ ಎಸ್. ಕಟ್ಟೆಮಾರ, ರಾಜವರ್ಮ ಬೈಲಂಗಡಿ, ಶ್ರಾವಕ-ಶ್ರಾವಿಕೆಯರು ಉಪಸ್ಥಿತರಿದ್ದರು.



**ಜಿನ ಮಂದಿರದ ಧಾಮ ಸಂಪ್ರೋಕ್ಷಣೆ, ಜಿನ ಬಿಂಬಗಳ ಪುನರ್ ಪ್ರತಿಷ್ಠೆಯಿಂದ ಪುರಾತನ ಬಸದಿ ದರ್ಶನಾರ್ಥಿಗಳಿಗೆ ಜಿನದೇವರು, ಮಹಾಮಾತೆ ಶ್ರೀ ಪದ್ಮಾವತಿ ದೇವಿ, ಜಿನವಾಣಿ ಮಾತೆ ಶ್ರೀ ಸರಸ್ವತಿ ದೇವಿ ಹರಸಲಿ** ಎಂದು ಪ್ರಾರ್ಥಿಸಿ ಹರಸಿದರು. ಮೃಣ್ಮಯಿ ಜಿನ ಬಿಂಬಗಳು ಭಕ್ತರಿಗೆ ದರ್ಶನದಿಂದ ಧರ್ಮಲಾಭ ಸದಾ ಕರುಣಿಸಲಿ ಎಂದು ಆಶಿಸಿದರು.

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722